(ಶ್ರೀ ಎಂ. ಎಸ್. ಕೃಷ್ಣನ್)

ರಿಕ್ರೂಟ್‌ಮೆಂಟ್ ಮಾಡುತ್ತಿಲ್ಲ. ಆದ್ದರಿಂದ ಆ ಕಛೇರಿಗಳು 3 ತಿಂಗಳಿಗೆ ಒಂದು ಸಾರಿ ಸೇರಿ ತೀರ್ಮಾನ ತೆಗೆದುಕೊಳ್ಳಬೇಕು ಎಂದು ತಾವು ಡೈರೆಕ್ಷನ್ ಕೊಡುತ್ತೀರಾ ?

Sri D. DEVARAJ URS.—The hon. Member's suggestion will be kept in mind.

Rise in the Firewood Permit Rate

739. Sri S. BANGARAPPA (Sorab).—

Will the Minister for Agriculture and Forests be pleased to state :—

(*a*) whether it has come to the notice of Government that there was a peaceful agitation by the people of Kharwar District demanding the reduction in the rates of permit for firewood ;

(b) the action the Government propose to take to reduce the rates ?

Sri K. H. PATIL (Minister for Agriculture and Forests).—

(*a*) Yes.

(b) Government has considered and taken decision. However Legislators are being consulted over the subject.

ಶ್ರೀ ಎಸ್. ಬಂಗಾರಪ್ಪ.—ಸ್ವಾಮಿ, ಕಾರವಾರ ಜಿಲ್ಲೆಯಲ್ಲಿ ಸೌದೆ ವಿಷಯದಲ್ಲಿ ನತ್ಯಾಗ್ರಹ ಬಹಳ ದಿವಸಗಳಿಂದ ನಡೆಯುತ್ತಿದೆ ಎಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ ? ಮತ್ತು ರಾಜ್ಯದ ಅನೇಕ ಕಡೆಗಳಿಂದ ಸೌದೆ ದರವನ್ನು ಕಡಿಮೆ ಮಾಡಬೇಕೆಂದು ಸಾರ್ವಜನಿಕರಿಂದ ಅರ್ಜಿಗಳು ಬಂದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

† ಶ್ರೀ ಕೆ. ಎಚ್. ಪಾಟೀಲ್.—ಅರ್ಜಿಗಳು ಬಂದಿವೆ. ಅವುಗಳನ್ನು ಸರ್ಕಾರ ವಿಚಾರ ಮಾಡುತ್ತಿದೆ. ಆ ದರವನ್ನು ಕಡಿಮೆ ಮಾಡುವ ಬಗ್ಗೆ ಮಾನ್ಯ ಸದಸ್ಯರ ಅಭಿಪ್ರಾಯವನ್ನು ಕೇಳಿದೆ. ಮತ್ತು ಅದನ್ನು ಪರಿಶೀಲನೆ ಮಾಡಲಾಗುತ್ತಿದೆ.

ಶ್ರೀ ಎಸ್ ಎಂ. ಶೀರನಾಳ ಚಂದ್ರಶೇಖರ್.—ತಾವು ಶಾಸನಕರ ಸಭೆಯನ್ನು ನಡೆಸಿ, ಆ ಸೌದೆಯ ರೇಟನ್ನು ಕಡಿಮೆ ಮಾಡುವ ಬಗ್ಗೆ ಆಶ್ವಾಸನೆಯನ್ನು ಕೊಟ್ಟಿದ್ದಿರಿ, ಅದನ್ನು ಪೂರ್ತಿ ಮಾಡುವ ಬಗ್ಗೆ ಸರ್ಕಾರದ ಆಜ್ಞೆಯನ್ನು ಯಾವಾಗ ಹೊರಡಿಸುತ್ತೀರಾ ?

ಶ್ರೀ ಕೆ. ಎಚ್ ಪಾಟೀಲ್.—ಈ ಗಾಗಲೇ ಈ ಸಂಬಂಧದಲ್ಲಿ ಒಂದು ಸಭೆ ನಡೆದದ್ದು ಮಾನ್ಯ ಸದಸ್ಯರಿಗೆ ಗೊತ್ತಿದೆ. ಇನ್ನೊಂದು ಸಭೆಯನ್ನು ಯಾವಾಗ ಮಾನ್ಯ ಸದಸ್ಯರಿಗೆ ಅನುಕೂಲವಾಗುತ್ತದೆ ಆಗ ಕರೆಯುತ್ತೇವೆ.

ಶ್ರೀ ಕೋಣಂದೂರುಲಿಂಗಪ್ಪ.—ಮತ್ತೊಂದು ಸಭೆಯನ್ನು ಯಾವಾಗ ಕರೆಯುತ್ತೀರಿ ?

ಶ್ರೀ ಕೆ. ಎಚ್. ಪಾಟೀಲ್.—ಶೀಘ್ರವಾಗಿ ಸಾಧ್ಯವಾದರೆ ನಾಳೆಯೇ ಕರೆಯುತ್ತೇವೆ.

ಶ್ರೀ ಎಸ್. ಬಂಗಾರಪ್ಪ.—ಈಗ ಇರುವ ದರ ಜಾಸ್ತಿಯಾಗಿರುವುದರಿಂದ ಜನಗಳಿಗೆ ಅನ್ಯಾಯವಾಗಿದೆ ಎಂಬುದು ಸರ್ಕಾರದವರಿಗೆ ಗೊತ್ತಿದೆಯೇ ?

ಶ್ರೀ ಕೆ. ಎಚ್. ಪಾಟೀರ್.—ಇದು ನ್ಯಾಯಾನ್ಯಾಯದ ಪ್ರಶ್ನೆಯಲ್ಲ. ಅದನ್ನು ಜನಗಳಿಗೆ ಪುಕ್ಕಟೆಯಾಗಿ ಕೊಡಬೇಕೆಂದರೆ ಸರ್ಕಾರಕ್ಕೆ ಅನ್ಯಾಯವಾಗುತ್ತದೆ. ಜನಗಳಿಗೆ ಬೇಕಾದಂತಹ ಸೌಲಭ್ಯವನ್ನು ಎಷ್ಟರಮಟ್ಟಿಗೆ ಕೊಡಪ್ಪದಕ್ಕೆ ಸಾಧ್ಯ ಎಂಬುದನ್ನು ರಾಜ್ಯದ ಹಿತವನ್ನು ನೋಡಿ ಕೊಂಡು ಕೊಡಬೇಕಾಗುತ್ತದೆ. ಮಾನ್ಯ ಸದಸ್ಯರಿಗೆ ಎಷ್ಟರಮಟ್ಟಿಗೆ ಈ ಬಗ್ಗೆ ಉತ್ಸುಕತೆ ಇದೆಯೆಂಬುದನ್ನು ನಾನು ತಿಳಿದುಕೊಂಡಿದ್ದೇನೆ

New Steel Plant of M. I. S. L.

780. Sri B. BYRAPPAJI (Turuvekere).—

Will the Minister for Industries be pleased to state :—

(*a*) when the new steel pant was commissioned at Mysore Iron and Steel Ltd;

(*b*) the number of German Engineers who were deputed to work ;

(*c*) the amount of expenditure towards these Engineers (Salary, allowances, entertainment etc.) since the last one year ?

Sri S. M. KRISHNA (Minister for Industries).—

(*a*) The dates of commissioning of the various units of the new steel Plant are furnished below :—

1.	New Rolling Mills—Blooming Mills	2-9-1964
2.	120 Tonne Arc Furnace	10-2-1965
3.	Oxygen plant	14-6-1965
4.	New Rolling Mills Finishing Section	17-6-1965
5.	L. D. Plant	1-7-1965
6,	Lime Calcination plant	27-8-1965

(b) The total number of foreign technical personnel engaged in the new Steel Plant were 85 up to 1970-71.

(*c*) There was no foreign technicians serving the company for the New Steel Plant during the year 1971-72.

ಶ್ರೀ ಬಿ. ಬೈರಪ್ಪಾಜಿ.—ನ್ಯಾಮಿ ಎಂ. ಐ. ಎಸ್. ಎರ್. ನಲ್ಲಿ ವಿದೇಶಿ ತಾಂತ್ರಿಕ ಸಿಬ್ಬಂದಿ ವರ್ಗದವರು 85 ಜನ ಇಂಜಿನಿಯರು ಇದ್ದರು ಎಂದು ಹೇಳಿದ್ದೀರಿ, ಹಾಗಾದರೆ ಅಲ್ಲಿ ಅಷ್ಟು ವಿದೇಶಿ ಇಂಜಿನಿಯರುಗಳ ಅವಶ್ಯಕತೆ ಇತ್ತೇ ? ಅವರು ಅಲ್ಲಿ ಇದ್ದಂತಹ ಕಾಲದಲ್ಲಿ ಲಕ್ಷಾಂತರ ರೂಪಾಯಿ ಗಳನ್ನು ತಾವು ಖರ್ಚು ಮಾಡಿದ್ದೀರಿ, ಆದರೂ ಸಹ ಎಂ. ಐ. ಎಸ್. ಎರ್. ನಲ್ಲಿ ಯಾವುದೂ ಅನು ಕೂಲವಾಗಿಲ್ಲ ಎಂಬುದು ತಮ್ಮ ಗಮನಕ್ಕೆ ಬಂದಿಲ್ಲವೇ ?

† ಶ್ರೀ ಎಸ್. ಎಂ. ಕೃಷ್ಣ.—1962 ನೇ ಇಸವಿಯಿಂದ 1972 ನೇ ಇಸವಿಯವರೆಗೆ ನ್ಯೂ ಪ್ಲಾಂಟ್ ಕನ್‌ಸ್ಟ್ರಕ್‌ನ್‌ಗೋಸ್ಕರ 85 ಜನ ವಿದೇಶೀ ತಾಂತ್ರಿಕಾರರು ಅಲ್ಲಿ ಇದ್ದರು. ಆಗ ಸರ್ಕಾರವನ್ನು ನಡೆಸುತ್ತಿದ್ದಂತಹ ಜನ 92 ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿ 85 ಜನ ತಾಂತ್ರಿಕಾರರನ್ನು ಇಟ್ಟುಕೊಂಡು ಕೆಲಸ ಮಾಡಿಸುತ್ತಿದ್ದರು.

Sri ABDL KHUDDUS ANWAR.—If I remember correct, the Blooming Mills and the New Rolling Mills Finishing Section were both commissioned on 2-9-1964. If so, what happened to the production during these four months ?